**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ**

**ದಿಃ 07.01.2026**

**ಪಾಟೀ ಸವಾಲುಃ ವಾದಿ ಪರ ಶ್ರೀ ಜೆ ಜೆ ವಕೀಲರಿಂದ**

ವಾದಿ ನನಗೆ ಮಗಳು . 4 ನೇ ಪ್ರತಿವಾದಿಯು ನನಗೆ ಹೆಂಡತಿ . ಕಾಳಪ್ಪ ನವರಿಗೆ 8 ಜನ ಮಕ್ಕಳು . ಅದರಲ್ಲಿ ಹೆಣ್ಣು ಮಕ್ಕಳು 5 ಜನ , ಗಂಡು ಮಕ್ಕಳು 3 ಜನ . ರೋಹಿಣಿ ನನಗೆ ಅಕ್ಕ ಆಗಬೇಕು. ರೋಹಿಣಿ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ . ರೋಹಿಣಿರವರಿಗೆ 4 ಜನ ಮಕ್ಕಳು . ಅವರು ಪ್ರತಿವಾದಿ 3 ರಿಂದ 6 ರವರಾಗಿರುತ್ತಾರೆ ಎಂದರೆ ಸರಿ . ನಾನು ರೋಹಿಣಿ ಯವರ ಮಗಳನ್ನು ಮದುವೆಯಾಗಿರುತ್ತೇನೆ ಎಂದರೆ ಸರಿ . ನನಗೆ ಒಬ್ಬಳೇ ಮಗಳು ಎಂದರೆ ಸರಿ . ನಾನು 4 ನೇ ಪ್ರತಿಯೊಂದಿಗೆ 1996 ರಲ್ಲಿ ವಿವಾಹವಾಗಿರುತ್ತೇನೆ ಎಂದರೆ ಸರಿ . ನಾನು ಮತ್ತು 4 ನೇ ಪ್ರತಿವಾದಿ ಸುಮಾರು 20 ವರುಷಗಳು ಸಾಂಸಾರಿಕಾ ಜೀವನ ಮಾಡಿರುತ್ತೇವೆ . ವಾದಿಯು ಕುಶಾಲನಗರದಲ್ಲಿ 1 ರಿಂದ 9 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತಾರೆ ಎಂದರೆ ಸರಿ . ನಾನು 4 ನೇ ಪ್ರತಿವಾದಿಗೆ ಅನೇಕ ಬಾರಿ ದೈಹಿಕ ಮತ್ತು ಮಾನಸಿಕವಾಗಿ ಹಿಂಸಿಸುತ್ತೇನೆ ಎಂದರೆ ಸರಿಯಲ್ಲ . 4 ನೇ ಪ್ರತಿವಾದಿಯರು ವಾದಿಯನ್ನು ಟೈಲರಿಂಗ್ ಕೆಲಸ ಮಾಡುತ್ತಾ ಓದಿಸಿರುತ್ತಾರೆ ಎಂದರೆ ಸರಿಯಲ್ಲ. 10 ನೇ ತರಗತಿಗೆ ವಾದಿಯನ್ನು ಸೇರಿಸಬೇಕಾದರೆ 4 ನೇ ಪ್ರತಿವಾದಿಯೊಂದಿಗೆ ನಾನು ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆಗ 5 ಮತ್ತು 6 ನೇ ಪ್ರತಿವಾದಿಗಳು ನ್ಯಾಯಾ ಪಂಚಾಯಿತಿ ಮಾಡಿ ನನಗೆ ಬುದ್ದಿವಾದ ಹೇಳಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು 4 ನೇ ಪ್ರತಿವಾದಿ ಮತ್ತು ವಾದಿಯವರನ್ನು ಮನೆಯಿಂದ ಹೊರಗಡೆ ಹಾಕಿರುತ್ತೇನೆ ಎಂದರೆ ಸರಿಯಲ್ಲ.

ನಾನು ಮಗಳನ್ನು ಓದಿಸಲು ಹೆಚ್ಚಿನ ವರದಕ್ಷಿಣೆ ತರಬೇಕೆಂದು 4 ನೇ ಪ್ರತಿವಾದಿಯವರೊಂದಿಗೆ ಗಲಾಟೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ವಾದಿ ಮತ್ತು 4 ನೇ ಪ್ರತಿವಾದಿಯನ್ನು 16 ನೇ ಇಸ್ವಿಯಲ್ಲಿ ಮನೆಯಿಂದ ಹೊರಗಡೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಮನೆಯಿಂದ ಹೊರ ಬಂದ ಮೇಲೆ ವಾದಿ ಮತ್ತು 4 ನೇ ಪ್ರತಿವಾದಿ ಕೆ ಆರ್ ನಗರ ತಾಲೂಕು , ಬ್ಯಾಡರಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ . 10 ನೇ ತರಗತಿಯಿಂದ ದ್ವಿತೀಯ ಪಿ ಯು ಸಿ ವರೆಗೆ ವಾದಿಯು ಕೆ ಆರ್ ನಗರ ತಾಲೂಕಿನಲ್ಲಿ ವ್ಯಾಸಂಗ ಮಾಡಿರುತ್ತಾರೆ ಎಂದರೆ ಸರಿ . ವಾದಿ ಮತ್ತು 4 ನೇ ಪ್ರತಿವಾದಿಯವರು ಜೀವನಾಂಶ ಕೋರಿ ಸಿ ಮಿಸ್ ನಂ 284/2017 ರಂತೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಸದರಿ ಪ್ರಕರಣದಲ್ಲಿ ನಾನು ಹಾಜರಾಗಿ ವಿಚಾರಣೆ ನಡೆಸದೇ ನನ್ನ ವಿರುದ್ಧವಾಗಿ ಆದೇಶ ವಾಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ನಾನು ಆ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದು ನುಡಿದರು. ನಾನು ವಾದಿ ಮತ್ತು 4 ನೇ ಪ್ರತಿವಾದಿಗೆ ಇಲ್ಲಿಯವರೆಗೂ ಜೀವನಾಂಶ ನೀಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಆದಾಯ ಇಲ್ಲದ ಕಾರಣ ನೀಡಿರುವುದಿಲ್ಲ ಎಂದು ನುಡಿದರು. ದಾವಾಸ್ವತ್ತು ಪಿತ್ರಾರ್ಜತ ಸ್ವತ್ತು ಎಂದರೆ ಸರಿಯಲ್ಲ. ದಾವಾಸ್ವತ್ತು ಪಿತಾರ್ಜಿತ ಸ್ವತ್ತು ಮತ್ತು ಒಟ್ಟು ಕುಟುಬಂದ ಸ್ವತ್ತು ಎಂದರೆ ಸರಿಯಲ್ಲ. ಕಾಳಪ್ಪನವರಿಗೆ ದಾವಾಸ್ವತ್ತು ಸರಕಾರದಿಂದ ಮಂಜೂರು ಆಗಿರುತ್ತದೆ. ಕಾಳಪ್ಪನವರಿಗೆ ಸರ್ವೆ ನಂ 3/27 ರಲ್ಲಿ 1 ಎಕರೆ 28 ಸೆಂಟ್ಸ್, ಸರ್ವೆ ನಂ 3/29ಪಿ2 ರಲ್ಲಿ 1 ಎಕರೆ 20 ಸೆಂಟ್ಸ , ಸರ್ವೆ ನಂ 7/4 ರಲ್ಲಿ 8 ಎಕರೆ 40 ಸೆಂಟ್ಸ ಮಂಜೂರು ಆಗಿರುತ್ತದೆ. ಒಟ್ಟು 11-12 ಎಕರೆ ಮಂಜೂರು ಆಗಿರುತ್ತದೆ ಎಂದರೆ ಸರಿ .

ನನ್ನ ತಾತ ಮರಣ ಹೊಂದಿದ ನಂತರ ಎಲ್ಲಾರು ಒಟ್ಟು ಕುಟುಂಬದಲ್ಲಿ ವಾಸ ಇರುತ್ತೇವೆ ಎಂದರೆ ಸಾಕ್ಷಿಯು ನನ್ನ ತಾತನ ಆಸ್ತಿ ಅಲ್ಲ ಎಂದು ನುಡಿದರು. ನನ್ನ ತಂದೆ ಕಾಳಪ್ಪ ಮತ್ತು ಅವರ ಹೆಂಡತಿ ಈಗ ಬದುಕಿರುವುದಿಲ್ಲ . ನನ್ನ ತಂದೆ ಮತ್ತು ತಾಯಿ ಮರಣ ಹೊಂದಿದ ನಂತರ ಎಲ್ಲಾ ಮಕ್ಕಳು ಸೇರಿ ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸಾಕ್ಷಿಯು 3 ಜನ ಗಂಡು ಮಕ್ಕಳು ಮಾತ್ರ ವ್ಯವಸಾಯ ಮಾಡುತ್ತಿರುತ್ತೇವೆ ಎಂದು ನುಡಿದರು. ನನ್ನ ತಂದೆ ಮರಣ ಹೊಂದಿದ ನಂತರ ನನ್ನ ತಾಯಿ ಮತ್ತು 3 ಜನ ಗಂಡು ಮಕ್ಕಳ ಹೆಸರಿನಲ್ಲಿ ಜಂಟಿ ಖಾತೆ ಇರುತ್ತದೆ ಎಂದರೆ ಸರಿ . ಎಂ ಆರ್ ನಂ 2/2007 – 2008 ರಂತೆ ನಮ್ಮಗಳ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ ಸರಿ . ನಾನು ದ್ವಿತೀಯ ಪಿ ಯು ಸಿ ರವೆರೆಗ ವ್ಯಾಸಂಗ ಮಾಡಿರುತ್ತೇವೆ. ನನಗೆ ಕನ್ನಡ ಓದಲು ಬರುತ್ತದೆ. ನಿಪಿ 2 ಮತ್ತು 4 ರಲ್ಲಿ ಪಿತ್ರಾರ್ಜಿತ ಎಂದು ನಮೂದು ಆಗಿರುತ್ತದೆ ಎಂದರೆ ಸರಿ . **ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲಾತಿಯನ್ನು ನೋಡಿ ದಾವಾಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ನೋಡಿ ಒಪ್ಪಿದ ಮೇರೆಗೆ ಸದರಿ ದಾಖಲಾತಿಯನ್ನು ನಿಪಿ 5 ಎಂದು ಗುರುತಿಸಲಾಯಿತು.** ದಾವಾ ಆಸ್ತಿಯು ಮೊದಲು ತಾತನ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ 5 ರಲ್ಲಿ ಸರಕಾರಿದಿಂದ ಮಂಜೂರು ಆದ ಜಮೀನು ಎಂದು ನಮೂದು ಆಗಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. **ಈಗ ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದಾವಾಸ್ವತ್ತುಗಳ ನಕ್ಷೆಯಾಗಿರುತ್ತದೆ ಎಂದು ಒಪ್ಪಿದ ಮೇರೆಗೆ ನಿಪಿ 6 ಎಂದು ಗುರುತಿಸಲಾಯಿತು.** ದಾವಾಸ್ವತ್ತಿನಲ್ಲಿ 4 ನೇ ಪ್ರತಿವಾದಿಯು ಅನೇಕ ತೇಗದ ಮರಗಳನ್ನು ಬೆಳೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಪ್ರತಿನಿತ್ಯ ಪಾನಮತ್ತರಾಗಿ ಬಂದು ಗಲಾಟೆ

ಮಾಡುತ್ತಿದ್ದು 4 ನೇ ಪ್ರತಿವಾದಿಯು ದಾವಾಸ್ವತ್ತಿನಲ್ಲಿ ಬೆಳವಣಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಗೆ ಯಾವುದೆ ಸೌಲಭ್ಯವನ್ನು ಒದಗಿಸಿರುವುದಿಲ್ಲ ಎಂದರೆ ಸಾಕ್ಷಿಯು ನನ್ನನ್ನು ಬಿಟ್ಟು ಹೋದ ಮೇಲೆ ಒದಗಿಸಿರುವುದಿಲ್ಲ ಎಂದು ನುಡಿದರು. ವಾದಿ , 4 ನೇ ಪ್ರತಿವಾದಿ, ಭಾಗಂಶ ಕೋರಿದ್ದು 5 ಮತ್ತು 6 ಮತ್ತು 9 ನೇ ಪ್ರತಿವಾದಿ ಇದಕ್ಕೆ ಸಂಬಂದಪಟ್ಟಂತೆ ನ್ಯಾಯಾ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಬರಬೇಕಾದ ಬಾಗದಲ್ಲಿ ಅರ್ಧ ಭಾಗ ವಾದಿಗೆ ಕೊಡಬೇಕು ಎಂದು ನ್ಯಾಯಾ ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ದಿಃ 30.03.2022 ರಲ್ಲಿ ನನ್ನ ಸಮ್ಮುಖದಲ್ಲಿ ನ್ಯಾಯಾ ಪಂಚಾಯಿತಿ ಆಗಿರುತ್ತದೆ ಎಂದರೆ ಸರಿಯಲ್ಲ.

ದಾವಾಸ್ವತ್ತಿನಲ್ಲಿ ಕಾಫಿ ಬೆಳೆ ಇರುತ್ತದೆ ಎಂದರೆ ಸರಿಯಲ್ಲ. ನಾನು ದಾವಾಸ್ವತ್ತುಗಳಲ್ಲಿ ಜೋಳ ಬೆಳೆಯುತ್ತೇನೆ. ನಾನು ಉದ್ದೇಶ ಪೂರಕವಾಗಿ ಯಾವುದೆ ಸೌಲ್ಭ್ಯವನ್ನು ಹಾಗೂ ಜೀವನಾಂಶವನ್ನು ಕೊಡದೆ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ ಪರ ವಕೀಲರು ಮುಂದುವರಿದ ಪಾಟಿ ಸವಾಲಿಗೆ ಸಮಯವಕಾಶ ಕೋರಿದ್ದ ಸಮಯ ನೀಡಿ ಮುಂದೂಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ